# ಶಿಕ್ಷಣದ ಮಹತ್ವ

ಉಷಾ ಎಸ್. ಮೂರ್ತಿ

ಶಿಕ್ಷಣ ಜೀವನದ ಅವಿಭಾಜ್ಯ ಅಂಗ. ಸಮರ್ಪಕವಾದ ಶಿಕ್ಷಣ ಸಮಾಜದ ಉನ್ನತಿಗೆ ನೇರ ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ಶಿಕ್ಷಣ ಹೇಗಿರಬೇಕು ಎಂದು ಚಿಂತಿಸಿರುವ ಲೇಖಕಿ, ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು; ಅವರು 'ವಿವೇಕಪ್ರಭ'ದಲ್ಲಿ ಸ್ವಯಂಸೇವಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



### ಶಿಕ್ಷಣ ಎಂದರೇನು?

ಭಾರತೀಯರು ಶಿಕ್ಷಣ ಎಂಬ ಪದಕ್ಕೆ ಕೊಟ್ಟಿರುವ ಅರ್ಥ ಬಹಳ ವಿಶಾಲವಾದದ್ದು ಮತ್ತು ಆಳವಾದದ್ದು. ಅದನ್ನು ನಾವು, ಭಾರತೀಯರು ತಿಳಿದುಕೊಂಡರೆ ನಮ್ಮ ದೇಶದ ಸಂಸ್ಕೃತಿಯನ್ನು ಸ್ವಲ್ಪ ಅಭ್ಯಸಿಸಿದಂತಾಗುತ್ತದೆ. ಭಾರತೀಯ ಜೀವನಸಂಹಿತೆಯಲ್ಲಿ ಶಿಕ್ಷಣ ಎಂದರೆ, '**ಸಾ ವಿದ್ಯಯಾ ವಿಮುಕ್ತಯೇ**' ಎನ್ನುತ್ತಾರೆ. ಅಂದರೆ, ಯಾವುದು ಮನುಷ್ಯರನ್ನು ಅಸಹಾಯಕತೆಯಿಂದ, ಇತಿಮಿತಿಗಳಿಂದ ಈ ಪ್ರಪಂಚದ ಕಷ್ಟಕೋಟಲೆಗಳಿಂದ ಪಾರುಮಾಡುವುದೋ ಅದು ವಿದ್ಯೆ. ಎಂತಹ ಸಂದರ್ಭಗಳಲ್ಲೇ ಆಗಲಿ ಪರಿಸ್ಥಿತಿಯ ಕೈಗೊಂಬೆಯಾಗದೆ ಪರಿಸ್ಥಿತಿಯ ಪ್ರಭುವನ್ನಾಗಿಸುತ್ತದೆಯೋ ಅದು ವಿದ್ಯೆ. ಹಾಗೆಯೇ, ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿದಂತಾಗುತ್ತದೆಯೋ ಅದೇ ವಿದ್ಯೆ. ಸಂಸ್ಕಾರಗಳಿಂದ ಪ್ರಕೃತಿಯಾಗಿದ್ದ ಮಾನವ ಸುಸಂಸ್ಕೃತನಾಗುತ್ತಾನೆಯೋ ಅದೇ ಶಿಕ್ಷಣ. ಇದೇ ಅರ್ಥದಲ್ಲಿ ಗ್ರೀಕ್ ಚಿಂತಕ ಅರಿಸ್ಟಾಟಲ್ ಹೇಳುತ್ತಾನೆ: 'Education is a refuge in times of adverstiy and an ornament in times of prosperity.' ಕಷ್ಟಗಳಲ್ಲಿ, ಕ್ಲಿಷ್ಟ ಸನ್ನಿವೇಶಗಳಲ್ಲಿ, ಹತಾಶೆಯ ಸಂದರ್ಭಗಳಲ್ಲಿ ಶಿಕ್ಷಣವು ಆಸರೆ, ಆಧಾರ, ಭರವಸೆಗಳನ್ನು ನೀಡುತ್ತದೆ. ಹಾಗಯೇ ಸಮೃದ್ಧಿ, ಶಾಂತಿ ಸುಖಗಳ ಕಾಲದಲ್ಲಿ ಮನುಷ್ಯನ ಸೌಂದರ್ಯವನ್ನು ಹೆಚ್ಚಿಸಿ ಮೆರುಗನ್ನು ಕೊಡುವ ವರಪ್ರಸಾದವೇ ಶಿಕ್ಷಣ.

### ಶಿಕ್ಷಣದ ಅರ್ಥ

ಶಿಕ್ಷಣ ಎನ್ನುವ ಪದಕ್ಕೆ ಇಂಗ್ಲಿಷ್‌ನಲ್ಲಿ education ಎನ್ನುತ್ತೇವೆ. ಅದರ ಮೂಲ ಪದ ಲ್ಯಾಟಿನ್ ಭಾಷೆಯಲ್ಲಿ educare ಅಥವಾ educere. ಅದರ ಅರ್ಥ, 'ಹೊರಕ್ಕೆ ತೆಗೆ' ಎಂದು. ಮನುಷ್ಯ, ನಿನ್ನಲ್ಲಿ ಅಪರಿಮಿತವಾದ ಸಾಧ್ಯತೆ, ಅದ್ಭುತ ಸಾಮರ್ಥ್ಯ, ಅಪಾರವಾದ ಶಕ್ತಿ ಇದೆ. ಅವನ್ನು ಹೊರಹೊಮ್ಮಿಸು, ವ್ಯಕ್ತಗೊಳಿಸು. ಈ ಶಕ್ತಿಗಳು ನಿನ್ನ ಕೈಗೆಟುಕುವಂತೆ ಮಾಡು ಎಂದು. ಶಿಕ್ಷಣದ ಬಗ್ಗೆ ಪರಮಾದ್ಭುತ ವಿಚಾರಗಳನ್ನು ಕೊಟ್ಟ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: Education is the manifestation of the perfection already in man. ಶಿಕ್ಷಣದ ಬಗ್ಗೆ ಪಾಶ್ಚಾತ್ಯ ಶಿಕ್ಷಣತಜ್ಞನೊಬ್ಬ ಹೀಗೆ ಹೇಳುತ್ತಾನೆ: 'There is nothing more immoral than killing another person's sense of dignity.' ಮತ್ತೊಬ್ಬರ ಆತ್ಮಗೌರವಕ್ಕೆ ಧಕ್ಕೆ ತರುವುದಕ್ಕಿಂತ ಹೆಚ್ಚು ಅನೀತಿಯುತವಾದದ್ದು ಇಲ್ಲ. ಮತ್ತೆ ಮುಂದುವರಿದು, 'Interest in learning is to be found where there is inspiration born of success' ಎಂದು ಹೇಳುತ್ತಾನೆ.

### ಶಿಕ್ಷಣ – ರಾಷ್ಟ್ರದ ಸಂಪತ್ತು

ಒಂದು ರಾಷ್ಟ್ರ ಸಕಲ ಸಂಪತ್ತುಗಳಿಂದ ತುಂಬಿರಬಹುದು. ಆದರೆ ಶೀಲ, ಧರ್ಮ, ಶಿಕ್ಷಣ ಮೊದಲಾದುವುಗಳಿಂದ ಕೂಡಿರುವ ಸುಸಂಸ್ಕೃತ ಜನರಿಲ್ಲದಿದ್ದರೆ ಅದು ನೈತಿಕವಾಗಿ ಕುಸಿಯುತ್ತದೆ. ಇದನ್ನು ನಾವು ತಿಳಿದಿದ್ದರೆ, ಸಣ್ಣ ರಾಷ್ಟ್ರಗಳ ಗುಲಾಮರಾಗಿ ಸಾವಿರಾರು ವರ್ಷ ಬದುಕಬೇಕಾಗಿರಲಿಲ್ಲ. ಶಿಕ್ಷಣ ಒಂದು ಮೌಲ್ಯ, ನಾಗರಿಕತೆ ಅಲ್ಲ. ಅನುಕರಣೆ ಸಲ್ಲ ಎನ್ನುತ್ತಾರೆ, ಸ್ವಾಮಿ ವಿವೇಕಾನಂದರು. ಈಗಾಗಲೇ ನಮ್ಮಲ್ಲಿರುವ ಪರಿಪೂರ್ಣತೆಯನ್ನು ನಮ್ಮ ವ್ಯಕ್ತಿತ್ವದಲ್ಲಿ, ಬದುಕಿನ ಪ್ರತಿ ಹೆಜ್ಜೆಯಲ್ಲಿ ವ್ಯಕ್ತಗೊಳಿಸುವುದಕ್ಕೆ ಯಾವ ತರಬೇತಿ, ಯಾವ ಚೌಕಟ್ಟು, ಯಾವ ವ್ಯವಸ್ಥೆ ಸಹಾಯ ಮಾಡುತ್ತದೆಯೋ ಅದೇ ಶಿಕ್ಷಣ. ವ್ಯಕ್ತಿ, ರಾಷ್ಟ್ರ ಶಿಕ್ಷಿತವಾಗದಿದ್ದರೆ ಮುಂದಿನ ತಲೆಮಾರುಗಳು ನಮ್ಮೆಡೆಗೆ ಬೆರಗಿನಿಂದ ನೋಡುವಂತೆ ಮಾಡುತ್ತದೆ.

### ಶಿಕ್ಷಣ ಮತ್ತು ಸಂಸ್ಕಾರ

ಶಿಕ್ಷಣಕ್ಕೆ ಮುಖ್ಯವಾಗಿ ಬೇಕಾದದ್ದು ಸಂಸ್ಕಾರ. ಅಂತೆಯೇ ಪರಿಸರವೂ ಮುಖ್ಯವಾಗುತ್ತದೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ತಾಯಿಯೇ ಮೊದಲ ಗುರು. ಮನೆಯೇ ಮೊದಲ ಪಾಠಶಾಲೆ. ಮನೆಯ ಪರಿಸರ ವ್ಯಕ್ತಿತ್ವದ ಮೇಲೆ ತುಂಬಾ ಪರಿಣಾಮ ಬೀರುತ್ತದೆ. ವಿದ್ಯಾರ್ಥಿ ದೆಸೆಯಲ್ಲಿ ಮನೆಯ ಪ್ರಾಮುಖ್ಯತೆಯನ್ನು ಕಡೆಗಣಿಸಿರುವುದು ಈಗಿನ ಶಿಕ್ಷಣ ಪದ್ಧತಿಯಾಗಿದೆ. ಶಿಕ್ಷಣದ ಪ್ರಧಾನ ಶಕ್ತಿಗಳಾದ ಆಧ್ಯಾತ್ಮಿಕ ಶಕ್ತಿ, ಬೌದ್ಧಿಕ ಶಕ್ತಿ ಹಾಗೂ ಚಿಂತನ ಶಕ್ತಿಗಳನ್ನು ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಬೇಕಾಗಿದೆ. ಬೆಳೆಯುವ ಮನಸ್ಸಿಗೆ ಹಿತಕರವಾದ ವಾತಾವರಣವನ್ನು ಕಲ್ಪಿಸಬೇಕು. ಭಯ, ಸ್ವಂತಿಕೆಯನ್ನು ಮತ್ತು ಆತ್ಮ ಗೌರವವನ್ನು ಹೊಸಕಿಹಾಕಿಬಿಡುತ್ತದೆ. ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ತುಂಬಬೇಕು. ಸ್ಫೂರ್ತಿ ಪವಾಡ ಮಾಡಬಲ್ಲದು, ಧೈರ್ಯವನ್ನು ತುಂಬಬಲ್ಲದು. ವಿದ್ಯಾರ್ಥಿಗಳ ಮುಂದೆ ಯಾವಾಗಲೂ ಪ್ರೋತ್ಸಾಹದಾಯಕವಾದ ಮಾತುಗಳನ್ನೇ ಆಡಬೇಕು.

### ಶಿಕ್ಷಣ ಮತ್ತು ವ್ಯಕ್ತಿತ್ವ ವಿಕಸನ

ಸ್ವಾಮಿ ವಿವೇಕಾನಂದರು ಹೇಳುವಂತೆ ವ್ಯಕ್ತಿತ್ವ ವಿಕಸನವಾಗಬೇಕಾದರೆ ಮೂರು ವಿಷಯಗಳು ಅತ್ಯಾವಶ್ಯಕ. ಇಲ್ಲಿ ವ್ಯಕ್ತಿತ್ವ ಎಂದರೇನು ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಪ್ರಪಂಚದಲ್ಲಿ ಎಷ್ಟು ಜೀವಿಗಳಿದ್ದಾರೋ ಅವರೆಲ್ಲರ ವ್ಯಕ್ತಿತ್ವ ಬೇರೆಬೇರೆಯಾಗಿರುತ್ತದೆ. ವ್ಯಕ್ತಿತ್ವವನ್ನು ಬೇರೆಬೇರೆಯಾಗಿ ವಿಂಗಡಿಸಬಹುದು. ಇದನ್ನು ಸಂಸ್ಕರಣಕ್ರಿಯೆ ಎನ್ನಬಹುದು. ಇದು ಮೂರು ವಿಷಯಗಳಲ್ಲಿ ವಿಂಗಡಿಸಿಸದೆ, ಅವು ಸಂಸ್ಕಾರ, ಪರಿಸರ, ಪ್ರಕೃತಿ ನಿಸರ್ಗದಲ್ಲಿ ತನ್ನಿಂದ ತಾನೇ ಆಗುವ ಪ್ರಕ್ರಿಯೆ. ಸಂಸ್ಕೃತಿ ತನ್ನಿಂದ ತಾನೇ ಆಗುವುದಲ್ಲ. ಪ್ರಕೃತಿಯೊಂದಿಗೆ ಪೌರುಷ ಮತ್ತು ವಿವೇಕ ಸೇರಿದಾಗ ಅದು ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಪರಿಸರ ಶಿಕ್ಷಣಕ್ಕೆ ಮುಖ್ಯವಾಗಿ ಬೇಕಾದದ್ದು. ಪರಿಸರ ಉತ್ತಮವಾಗಿದ್ದರೆ ವ್ಯಕ್ತಿ ಸುಸಂಸ್ಕೃತನಾಗುತ್ತಾನೆ. ಇಲ್ಲದಿದ್ದರೆ ವಿಕೃತಿಯಾಗುತ್ತಾನೆ. ಯಾವ ಸಂಸ್ಕಾರದಿಂದ ವ್ಯಕ್ತಿ ಸುಸಂಸ್ಕೃತನಾಗುತ್ತಾನೋ ಅದೇ ಶಿಕ್ಷಣ. ಶಿಕ್ಷಿತ ವ್ಯಕ್ತಿ ನಿಜಾರ್ಥದಲ್ಲಿ ಶಕ್ತಿಯ ಖನಿ. ಯಾವ ಕೊರತೆಯೂ ಇಲ್ಲದ ಸ್ವಾವಲಂಬಿ. ವೀರ ಪೌರುಷಗಳ ರಾಶಿ. ಬುದ್ಧಿ, ವಿಕಸನ, ಯಶಸ್ಸು ಹಾಗೂ ಗೌರವಗಳನ್ನು ಗಳಿಸಿದವನು. ಅವನು ಹೊರಗೆ ರಾಜನಂತಿದ್ದರೂ ಒಳಗೆ ಸಂತನಂತಿರುತ್ತಾನೆ. ಅವನೊಬ್ಬ ಮಹಾನ್ ಶಕ್ತಿವಂತ. ನಮ್ಮೊಳಗೆ ಅಪಾರವಾದ ಶಕ್ತಿ ಇರುವುದರಿಂದಲೇ ಅದ್ಭುತ ಸಾಮರ್ಥ್ಯ ಇರುವುದರಿಂದಲೇ ನಾವು ಯಾರಿಗೂ ಹೆದರಬೇಕಾಗಿಲ್ಲ, ಯಾರನ್ನೂ ಅವಲಂಬಿಸಬೇಕಾಗಿಲ್ಲ ; ಬೇರೆಲ್ಲೂ ಸಹಾಯಕ್ಕಾಗಿ ಯಾಚಿಸಬೇಕಾಗಿಲ್ಲ.

### ಪರಿಪೂರ್ಣ ಶಿಕ್ಷಣ

ಆಧುನಿಕ ಭಾರತದ ಶ್ರೇಷ್ಠ ಸಂತರಾದ ಸ್ವಾಮಿ ವಿವೇಕಾನಂದರು ಮನುಷ್ಯ ಜನ್ಮದ ಹೆಗ್ಗಳಿಕೆ, ಸುಪ್ತ ಚೈತನ್ಯವನ್ನು ಕುರಿತು ಈ ಅದ್ಭುತವಾದ ಮಾತನ್ನು ಹೇಳುತ್ತಾರೆ: 'No books, no scriptures can ever imagine the glory of self that appears in man, the one God that one ever be the one God that one can exist.' ಮಾನವ ಪ್ರಕೃತಿಯ ಶಿಶು. ಜನಾಂಗ ಸುಶಿಕ್ಷಿತವಾಗಿದ್ದರೆ ಮುಂದೆ ಬೆಳೆಯುವ ಜನಾಂಗವೂ ಸುಶಿಕ್ಷಿತ ವಾಗಿರುತ್ತದೆ. ಶಿಕ್ಷಣ ಎಂದರೆ ಬರಿ ಪದವಿ ಪತ್ರಗಳನ್ನು ಗಳಿಸುವುದಲ್ಲ ಅಥವಾ ಪ್ರತಿಭಾ ಪಲಾಯನ ಮಾಡುವುದಲ್ಲ. ನಿಜವಾದ ಶಿಕ್ಷಣದ ಅರ್ಥವನ್ನು ತಿಳಿಯುವುದು ಮತ್ತು ಅದರಂತೆ ನಡೆಯುವುದು. ಶಿಕ್ಷಣ ಪಡೆದ ವ್ಯಕ್ತಿ ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳುವುದರ ಜೊತೆಜೊತೆಗೆ ಸಮಾಜಮುಖಿಯಾಗಿರಲೂ ಬೇಕು. ಶಿಕ್ಷಣದ ಪ್ರಾಮುಖ್ಯತೆಯನ್ನು ಸರಿಯಾಗಿ ಅರ್ಥಮಾಡಿಕೊಂಡು ಶಿಕ್ಷಿತರಾಗೋಣ. ನಮ್ಮ ಮುಂದಿನ ಜನಾಂಗವೂ ಶಿಕ್ಷಿತರಾಗಬೇಕೆಂಬ ನಿಟ್ಟಿನಲ್ಲಿ ಪ್ರಯತ್ನಪಡೋಣ. ❁

ಪೌರ್ಣಮಾಸ್ಯಾಂ ಯಥಾ ಚಂದ್ರ
ಏಕ ಏವಾತಿನಿರ್ಮಲಃ ।
ತೇನ ತತ್ಸದೃಶಂ ಪಶ್ಯೇತ್
ದ್ವಿಧಾದೃಷ್ಟಿರ್ವಿಪರ್ಯಯಃ ॥

ಪೂರ್ಣಿಮೆಯ ದಿನ ಅತಿ ನಿರ್ಮಲ ಚಂದ್ರನೊಬ್ಬನೇ ಇರುವನು. ಇಬ್ಬರು ಚಂದ್ರರನ್ನು ನೋಡುವುದು ನಮ್ಮ ದೃಷ್ಟಿದೋಷದಿಂದ. ಹೀಗೆಯೇ ಆತ್ಮನನ್ನು ಏಕನೂ ಅಕಳಂಕನೂ ಆಗಿದ್ದಾನೆಂದು ಭಾವಿಸಬೇಕು.

— *ಅವಧೂತಗೀತಾ*